# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 2/2019**

**ದೋ.ಸಾ. : 12 ಫ್ರಾ.ಸಾ. : 07**

| | | |
|---|---|---|
| ಸಾಕ್ಷಿಯ ಹೆಸರು | : | ಸುಭಾಶ ನಾಯ್ಕ |
| ತಂದೆಯ ಹೆಸರು | : | ಅರ್ಜುನ ನಾಯ್ಕ |
| ವಯಸ್ಸು | : | 52 ವರ್ಷ |
| ಕೆಲಸ | : | ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಲಾಖೆ, |
| ವಾಸ | : | ಕಾರವಾರ. |

**ದಿನಾಂಕಃ 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-</u>**

1. ನಾನು 2015 ರಿಂದ 2018 ರವರೆಗೆ ನಾನು ಅಂಕೋಲಾದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ನನಗೆ ಖಾಲಿ ಜಾಗ, ನಿವೇಶನ ಹಾಗೂ ಮನೆಗಳ ಅಳತೆ ಮಾಡುವ, ನಕ್ಷೆ ತಯಾರಿಸುವ ಅನುಭವ ಇರುತ್ತದೆ. ಈಗಾಗಲೇ ಹಲವಾರು ಪ್ರಕರಣಗಳಲ್ಲಿ ನಕ್ಷೆ ತಯಾರಿಸಿ ನೀಡಿ, ನ್ಯಾಯಾಲಯಗಳಲ್ಲಿ ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತೇನೆ.

2. ದಿ. 25-11-2017 ರಂದು ಅಂಕೋಲಾ ಪೊಲೀಸರು ಈ ಪ್ರಕರಣದ ಘಟನಾ ಸ್ಥಳವಾದ ಚಾಸಾ-1 ರವರ ಮನೆಯ ಬಳಿಯ ನಕಾಶೆಯನ್ನು ತಯಾರಿಸಿ ನೀಡುವಂತೆ ಕೋರಿಕೊಂಡಿದ್ದು, ಅದರಂತೆ ದಿ.27-11-2017 ರಂದು ಪೊಲೀಸ್ ಸಿಬ್ಬಂದಿಯಾದ ದುರ್ಗಪ್ಪ ಮೂಲಿಮನಿ ರವರು ನನ್ನನ್ನು ಕರೆದುಕೊಂಡು ಹೋಗಿ, ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ನಾನು ಸದರಿ ಸ್ಥಳವನ್ನು ಪರಿಶೀಲಿಸಿ, ನಕ್ಷೆ ತಯಾರಿಸಿ, ನಂತರ ಅದನ್ನು ಕವಚ ಪತ್ರದೊಂದಿಗೆ ಅಂಕೋಲಾ ಪೊಲೀಸರಿಗೆ ನೀಡಿರುತ್ತೇನೆ. ತಮ್ಮ ಕಚೇರಿಗೆ ಬಂದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು, ನಕಾಶೆಯನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಮತ್ತು ಕವಚ ಪತ್ರವನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–**

3. ನಿಪಿ–8 ರಲ್ಲಿ ಮನೆಯ ನಂಬರನ್ನು ನಮೂದಿಸಿಲ್ಲ ಎಂದರೆ ಸರಿ. ಸದರಿ ಮನೆಯ ಸುತ್ತಮುತ್ತಲಿನ ಜಾಗವು ಯಾವ ಸರ್ವೆ ನಂಬರಿಗೆ ಸೇರಿದ್ದು ಎಂದು ನಮೂದಿಸಿಲ್ಲ ಎಂದರೆ ಸರಿ. ನಕಾಶೆಯಲ್ಲಿ ತೋರಿಸಿರುವ ಮನೆಯ ಪಶ್ಚಿಮ ದಿಕ್ಕಿಗೆ ಬಾಳೆ ತೋಟ ಇರುತ್ತದೆ ಎಂದರೆ ಸಾಕ್ಷಿಯು, 2–3 ಬಾಳೆ ಗಿಡಗಳು ಮಾತ್ರ ಇತ್ತು ಎಂದು ನುಡಿಯುತ್ತಾರೆ. ಸದರಿ ಗಿಡಗಳನ್ನು ತೋರಿಸಲು ಯಾವುದೇ ತೊಂದರೆ ಇರಲಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡದೇ, ಪೊಲೀಸರ ಮಾತಿನಂತೆ, ಕಚೇರಿಯಲ್ಲಿಯೇ ನಕಾಶೆ ತಯಾರಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/–

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ